SRUJANI
ISSN: 2583-3510
Indian Journal of Innovative Research and Development
(SIJIRD)
Volume-1 (01), March-April 2022, Pp. 42-45
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in

# ಅಂಕಲಿಮಠದ ಶ್ರೀನಿರುಪಾಧೀಶ್ವರರು ಮತ್ತು ಅವರ ಶಿಷ್ಯ ಪರಂಪರೆ

**ಬೆಟ್ಟಪ್ಪ***
*ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***
ಭಾರತ ದೇಶದಲ್ಲಿ ಪುರಾತನವಾದಂತಹ ಅನೇಕ ಗುರುಮಠಗಳಿವೆ. ಇವು ಆಧ್ಯಾತ್ಮವನ್ನು ಬೋಧಿಸುತ್ತವೆ. ಅಂದಿನ ಪುರಾತನ ಪುಣ್ಯಪುರುಷರ ಚಿಂತನೆಗಳನ್ನು ವಸ್ತುವಾಗಿಸಿಕೊಂಡು ಬದುಕುವ ಅನೇಕ ಮಠಗಳು ನಮಗಿಂದು ಕಾಣಸಿಗುತ್ತವೆ. ಮಠ ಮಾನ್ಯಗಳು ಕೇವಲ ರಾಷ್ಟ್ರದೊಳಗೆ ಮಾತ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಕೂಡ ತಮ್ಮ ಸೇವೆಯನ್ನು ವಿಸ್ತರಿಸಿವೆ. ಅಂತಹ ಗುರುಮಠಗಳಲ್ಲಿ ಅಂಕಲಿ ಮಠವು ಕೂಡ ಒಂದು. ಪ್ರಸ್ತುತ ಲೇಖನದಲ್ಲಿ ಅಂಕಲಿ ಮಠದ ಶ್ರೀನಿರುಪಾಧೀಶ್ವರರು ಮತ್ತು ಅವರ ಶಿಷ್ಯ ಪರಂಪರೆಯ ಕುರಿತು ವಿಶ್ಲೇಷಿಸಲಾಗಿದೆ.

***Key Words:*** ಅಂಕಲಿ ಮಠ, ಶ್ರೀನಿರುಪಾಧೀಶ್ವರರು, ಆಧ್ಯಾತ್ಮ, ಗುರುಮಠ.

## ಪೀಠಿಕೆ

ಅಂಕಲಿಮಠದ ಶ್ರೀನಿರುಪಾಧಿ ಸ್ವಾಮಿಗಳು ಸದ್ಗುರು ಶ್ರೀ ಶ್ರೀ ಅಡವಿಸಿದ್ಧೇಶ್ವರರ ಆಶೀರ್ವಾದಿಂದ ಪುನೀತರಾಗಿ, ತಾನೇ ಪರಬ್ರಹ್ಮನಾಗಿ ಅಹಂಬ್ರಹ್ಮಸ್ಮಿ ಎಂಬಂತೆ ಗುರುಸ್ವರೂಪರಾಗಿ ದೇಶಾಟನೆಯನ್ನು ಕೈಗೊಳ್ಳುತ್ತಿದ್ದರು. ಅವರು ಹಳ್ಳಿ, ಪಟ್ಟಣ, ನಗರ ಮುಂತಾದ ಕಡೆ ವಿಹರಿಸುತ್ತಿದ್ದರು. ಮಾರ್ಗಮಧ್ಯದಲ್ಲಿ ಬರುವ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ ಮನಸ್ಸು ನಿರಾಳವಾದಾಗ ಕೆಲವು ಕಡೆ ತಾಗಿ ಮತ್ತೆ ಎಲ್ಲಿಯೂ ನೆಲೆಯಾಗದೆ ಮುಂದಿನ ಸ್ಥಳಕ್ಕೆ ಪ್ರಯಾಣಿಸುತ್ತಿದ್ದರು. ಸಾಧು-ಸತ್ಪುರುಷರು ಅವರೊಡನೆ ಕುಶಲೋಪರಿ ವಿಚಾರಿಸಿ ವಿನೋಧದಲ್ಲಿ ತೊಡಗಿ ತಮಗೆ ತಿಳಿದ ಮಾನವ ಧರ್ಮದ ಒಳಿತಿನ ವಿಚಾರಗಳನ್ನು ಹೇಳುತಿದ್ದರು, ಅಲ್ಲದೇ ತತ್ವಪದಗಳನ್ನು ರಚಿಸಿ ಹಾಡುತ್ತಿದ್ದರು.

## ನಿರುಪಾಧೀಶ್ವರರ ವ್ಯಕ್ತಿತ್ವ

ಅಂಕಲಿಮಠದ ಶ್ರೀ ನಿರುಪಾಧೀಶ್ವರರ ಆಶು ಕವಿಗಳಾಗಿದ್ದು ತತ್ವಪದಗಳನ್ನು ರಚಿಸಿ ಹಾಡುತ್ತಿದ್ದರಲ್ಲದೆ ತತ್ವಪದಗಳ ಮೂಲಕ ಜನರಲ್ಲಿ ಜಾಗೃತಿ ಮೂಢಿಸುತ್ತಿದ್ದರು. ಮಂಗಲ ಸ್ವರೂಪಿಗಳಾದ ಶ್ರೀಗುರುಗಳು ಸಾಧಕನಾದ ಶಿಷ್ಯನನ್ನು ಸ್ವತಂತ್ರಗೊಳಿಸಿ ಸಮಾಜದ ಒಳಿತಿಗೆ ದುಡಿಯುವಂತೆ ಆಶೀರ್ವದಿಸುತ್ತಿದ್ದರು. ಜೊತೆಗೆ ಮಾನವ ಧರ್ಮ ಪ್ರಸಾರ ಮಾಡಲು ಶಿಷ್ಯರಿಗೆ ಉಪನ್ಯಾಸ ನೀಡುತ್ತಿದ್ದರು. ಸ್ವತಃ ಕಾಯಕಯೋಗಿಯಾಗಿದ್ದ ಶ್ರೀಗುರುಗಳು ತಾವೇ ಭೀಕ್ಷೆಗೆ ತೆರಳುತಿದ್ದರು. ಗಂಡು-ಹೆಣ್ಣು ಎಂಬ ಲಿಂಗಬೇಧವನ್ನಾಗಲಿ ಅಥವ ಮೇಲು-ಕೀಳು ಭಾವನೆಯನ್ನಾಗಲಿ ಹೊಂದದೆ ಎಲ್ಲರೊಡನೆ ಬೆರೆಯುವ ಸಮಾನ ಮನಸ್ಕರಾಗಿದ್ದರು.

ಅಷ್ಟದಶ ಶಾಸ್ತ್ರಗಳನ್ನು ಬಲ್ಲವರಾಗಿದ್ದ ಶ್ರೀಗುರುಗಳು ತಮ್ಮ ಶಿಷ್ಯಂದಿರಿಗೆ ಅಡವಿಸಿದ್ಧೇಶನ ಹೆಸರಿನಲ್ಲಿ ಹರಸುವುದರ ಜೊತೆಗೆ ತಮ್ಮ ಶಿಷ್ಯರಿಗೆ ಮೌಖಿಕ ರೂಪದಲ್ಲಿ ಉಪದೇಶವನ್ನು ನೀಡುತಿದ್ದರು. ಭಜನ ಪ್ರಿಯರಾಗಿದ್ದ ಇವರು ಯಾವುದೇ ಜಾತಿ, ಮತ, ಭಾಷೆ, ಗಡಿಗಳ ಬೇಧವಿಲ್ಲದೆ ಯಥಾ ಗುರು- ತತಾ ಶಿಷ್ಯ ಎಂಬಂತೆ ಅಂಕಲಗಿ ಅಡವಿಸಿದ್ಧೇಶ್ವರರಂತೆ ಬದುಕುತ್ತಿದ್ದರು. ಸಂಚಾರ ಮಾಡುವಾಗ ಪುಣ್ಯಕ್ಷೇತ್ರಗಳ ಮಹಿಮೆಯನ್ನು ಅರಿಯುತ್ತಾ ಮುಂದೆ ಮುಂದೆ ಸಾಗುತಿದ್ದರು. ಇವರ ನಡೆ-ನುಡಿಗಳಿಗೆ ಮಾರುವಾಗಿ ಅನೇಕ



ಶ್ರೀನಿರುಪಾಧೀಶರರು

*Please cite this article as:* ಬೆಟ್ಟಪ್ಪ (2022). ಅಂಕಲಿಮಠದ ಶ್ರೀನಿರುಪಾಧೀಶ್ವರರು ಮತ್ತು ಅವರ ಶಿಷ್ಯ ಪರಂಪರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(1), 42–45.

ಮಂದಿ ಇವರ ಶಿಷ್ಯರಾಗಿದ್ದರು. ಅವುರುಗಳಲ್ಲಿ ಪ್ರಮುಖರಾದವರೆಂದರೆ ನವಲಗುಂದ ನಾಗಲಿಂಗಸ್ವಾಮಿಯವರು.

**ನವಲಗುಂದ ನಾಗಲಿಂಗಸ್ವಾಮಿಯವರು**

ಕನ್ನಡನಾಡಿನ ಸಾಧು ಸತ್ಪುಷರಲ್ಲಿ ಅಜಾತ ನಾಗಲಿಂಗಪ್ಪ ಸ್ವಾಮಿಯೂ ಕೂಡ ಒಬ್ಬರಾಗಿದ್ದಾರೆ. ನಾಗಲಿಂಗವಧೂತರ ಹಿರಿಯರು ಮೈಸೂರು ಪ್ರಾಂತ್ಯದ ಕರಸ್ಥಲದ ನಾಗಲಿಂಗಸ್ವಾಮಿಯವರು ಸಾಧು ಒಬ್ಬರ ಭಕ್ತರಾಗಿದ್ದರು. ನಾಗಲಿಂಗ ಯತಿಗಳು ಮೈಸೂರು ಪ್ರಾಂತ್ಯದವರಾಗಿದ್ದರು. ಇವರು ತತ್ವಜ್ಞಾನಿ, ಪವಾಡ ಪುರುಷರಾಗಿ, ಗ್ರಂಥಕರ್ತನಾಗಿ, ದೇಶಿ ಜ್ಞಾನಪರಂಪರೆಗಳ ಋಣಿಯಾಗಿದ್ದನು. ಅವನು ಕರ್ನಾಟ ಬಲ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರದಲ್ಲಿನ 101 ವಿರಕ್ತರಲ್ಲಿ ಒಬ್ಬರಾಗಿದ್ದರು. ವಿರಕ್ತಿ ಪೂರ್ವದಲ್ಲಿ ನಾಗಕನ್ಯೆ ಎಂಬ ಮಡದಿಯು ಇದ್ದಳು. ಜೀವನಕ್ಕಾಗಿ ಬಂಗಾರದ ಆಭರಣಗಳನ್ನು ತಯಾರಿಸುವ ಕಾಯಕವನ್ನು ನಡೆಸುತ್ತಿದ್ದನು. ಕಾಲಾಂತರದಲ್ಲಿ ವಿರಕ್ತಿ ಹೊಂದಿ ವಿಜಯನಗರಕ್ಕೆ ಧಾವಿಸಿದ್ದನು. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಜವಳಗೇರಿ ಎಂಬ ಗ್ರಾಮದಲ್ಲಿ ನೆಲೆಸಿದ್ದ ಮೌನಾಚಾರಿ ಎಂಬುವವರ ಪತ್ನಿಗೆ ತಮ್ಮ ಚರಿತೆಯನ್ನು ಹೇಳುತ್ತಿದ್ದರು.

ಶಾಕ್ತ ಪರಂಪರೆಯ ಅಧಿದೇವತೆಯಾದ ಕಾಳಿಕಾದೇವಿಯ ಆರಾಧಕರಾಗಿದ್ದರು. ಮೌನಾಚಾರಿ ಮತ್ತು ಪತ್ನಿ ವಿಶ್ವಕರ್ಮ ಸಮುದಾಯದ ಸಾನಗ ಋಷಿ ಗೋತ್ರಕ್ಕೆ ಸೇರಿದವರಾಗಿದ್ದರು. ಕಮ್ಮಾರ ವೃತ್ತಿಯಿಂದ ತಮ್ಮ ಜೀವನವನ್ನು ನಡೆಸುತ್ತಿದ್ದರು. ದಂಪತಿಗಳಿಬ್ಬರು ಪೂಜೆ, ಪುನಸ್ಕಾರ, ಆಚಾರ-ವಿಚಾರ, ನಂಬಿಕೆ, ನಿಷೇಧಗಳಲ್ಲಿ ನಂಬಿಕೆಯನ್ನಿಟ್ಟಿದ್ದರು. ಮೌನಾಚಾರರು ಹೆಂಡತಿಗೆ ನಾಗಲಿಂಗಯತಿಗಳ ಚರಿತ್ರೆಯನ್ನು ಹೇಳುತ್ತಿದ್ದಾಗ ಭಕ್ತಿಯಿಂದ ಕೇಳಿಸಿಕೊಳ್ಳುತಿದ್ದಳು.

ನಾಗಲಿಂಗನು ಹುಣ್ಣಿಮೆ ಚಂದ್ರಮನಂತೆ ದಿನ ದಿನಕ್ಕೆ ಬೆಳೆದನು. "ಒಂದು ದಿನ ನಾಗಲಿಂಗನು ಅನ್ಯಮನಸ್ಕನಾಗಿ, ಖಿನ್ನವಾಗಿ ಸ್ನಾನಕ್ಕೆಂದು ತಮ್ಮ ಬಚ್ಚಲಮನೆಯ ಕದವನ್ನು ತಳ್ಳಿ ಒಳಕ್ಕೆ ಕಾಲಿಟ್ಟನು. ಆ ಹೊತ್ತಿನಲ್ಲಿ ತಾಯಿ ನಾಗಮ್ಮಳು ಸ್ನಾನಕ್ಕೆ ಕುಳ್ಳಿತಿದ್ದಳು ಬಾಗಿಲು ಕೊಂಡಿ ಮುರಿದು ಹೊಗಿದ್ದರಿಂದ ತಾಯಿಗೆ ಕಸಿವಿಸಿಯಾಯಿತು ಕೋಪಗೊಂಡಳು". ಹಿಂದು ಮುಂದು ನೋಡದೆ ಹಾಗೆ ನುಗ್ಗಿದ್ದಿಯಲ್ಲ ಕಣ್ಣು ಕಾಣಲ್ಲವೇ? ನಾಚಿಕೆಗೇಡಿ, ಎಂದು ಬೈದಳು.[1] ಮಾನಸಿಕವಾಗಿ ನಾಗಲಿಂಗನು ಅಡಲೆಸಿಯಂಡ್ ಪಿರಿಯಡ್ನಲ್ಲಿದ್ದರಿಂದ ಅವನು ಹೊರಗೆ ನಿಂತು "ನಾನು ಮೂಡಿ ಬಂದ ಹಾವಿಯನ್ನು ಹಾಲುಂಡ ಹಾವಿಯನ್ನು ನೋಡಿದರೆ ನಿನಗೇನು ಕೇಡಾಯಿತು? ಎಂದು ಪ್ರಶ್ನಿಸಿದನು. ಮತ್ತೆ ಬೈದಳು, ಆಗ ನಾನು ಮನೆಬಿಟ್ಟು ಹೋಗುತ್ತೇನೆ ಎಂದಾಗ ತಾಯಿ 'ಹಾಳಾಗಿ ಹೋಗು' ಎಂದಳು ಅದೇ ಆಶೀರ್ವಾದವೆಂದು ತಿಳಿದು ಅಲ್ಲಿಂದ ಮನೆ ಬಿಟ್ಟು ಬೀದಿ ಬೀದಿ, ಹಳ್ಳಿ ಬಿಟ್ಟು, ಗುಡ್ಡ, ಗವಿ, ಗಿರಿ, ಕಂದರ, ಕಣಿವೆ, ಕಾಡು, ಮೇಡು, ಸುತ್ತಿ ಗುರುವಿಗಾಗಿ ಅರಸುತ್ತಾ ಸಾರವಾಡದ ಶಿವಯ್ಯಸ್ವಾಮಿಯಿಂದ ತಕ್ಕಮಟ್ಟಿಗಿನ ಜ್ಞಾನಪಡೆದುಕೊಂಡು ಪುನಃ ಗುರುವಿಗಾಗಿ ತಲೆಕಟ್ಟುವಿನ ಅಂಕಲಿಮಠಕ್ಕೆ ಹೋದನು.

ನಾಗಲಿಂಗನು ನಿರುಪಾಧೀಶ್ವರರ ಮಠಕ್ಕೆ ಬಂದಾಗ ಶ್ರೀಗುರು ನಿರುಪಾಧೀಶನು ಮಠದಲ್ಲಿ ಇರಲ್ಲ ಯಾವುದೋ ಕಾರ್ಯದ ನಿಮಿತ್ಯ ಕುದುರೆಯೇರಿ ಹೊರಗಡೆ ಹೊಗಿದ್ದರು ಎಂದು ಮಠದಲ್ಲಿನ ಶಿಷ್ಯಂದಿರು ಹೇಳಿದರು. ನಿರುಪಾಧೀಗಳು ಅಷ್ಟು ಸುಲಭವಾಗಿ ಯಾರನ್ನು ಶಿಷ್ಯರನ್ನಾಗಿ ಸ್ವಿಕರಿಸುತ್ತಿದ್ದಿಲ್ಲ. ಇದ್ದನ್ನು ತಿಳಿದ ನಾಗಲಿಂಗನು ಗುರು ನಿರುಪಾಧೀಶ್ವರರನ್ನು ಒಲಿಸಿಕೊಳ್ಳಲು ಏನು ಮಾಡಲಿ? ಎಂಬ ವಿಚಾರ ಅವನ ತಲೆಯಲ್ಲಿ ಸುಳಿದಾಡತೊಡಗಿತು. ಚಿಂತಿಸಿ ಯೋಚಿಸಿದನು. ಆಗ ಗುರುಗಳು ಹೋಗಿ ಬರುವ ಮಾರ್ಗದವರೆಗೂ ಬಂದಿದ್ದನು. ಆಗ ಹಳ್ಳದ ದಾರಿಯಲ್ಲಿ ಕುದುರೆಯ ಗೊರಸಿನ ಹೆಜ್ಜೆ ಗುರುತುಗಳು ಸಿಕ್ಕಿದವು ಅದನ್ನು ನೋಡಿದ ಕೂಡಲೆ ನಾಗಲಿಂಗನ ತಲೆಯಲ್ಲಿ ಮಿಂಚಿನಂತೆ ಆಲೋಚನೆಯೊಂದು ಬಂದು ಕುದುರೆ ಬರುವ ಹೊತ್ತಿಗೆ ಅದೇ ಮಾರ್ಗದ ಹಳ್ಳದ ಉಸುಕು (ಮರಳು) ನಲ್ಲಿ ತನ್ನ ಕುತ್ತಿಗೆವರೆಗೂ ತಗ್ಗು ತೆಗೆದುಕೊಂಡು ಅದರಲ್ಲಿ ಇಳಿದು ಕುತ್ತಿಗೆವರೆಗೂ ಮರಳು ಮುಚ್ಚಿಕೊಂಡುಬಿಟ್ಟನು.

ಗುರು ನಿರುಪಾಧೀಶ್ವರರು ಹಳ್ಳಿಯ ಭಿಕ್ಷೆ ಮುಗಿಸಿಕೊಂಡು ಶ್ರೀಮಠಕ್ಕೆ ಮರಳುತ್ತಿದ್ದರು. ಆಗ ಹಿರೇಹಳ್ಳವನ್ನು ದಾಟಿ ಶ್ರೀಮಠಕ್ಕೆ ಹೋಗುವ ಮಾರ್ಗದ ಮರಳು ದಾರಿಯಲ್ಲಿ ತುಂಬ ಮರಳಿದ್ದರಿಂದಾಗಿ ಕುದುರೆಯು ಎಂದಿನಂತೆ ನಿಧಾನವಾಗಿ ಚಲಿಸುತ್ತದೆ. ಆಗ ನಾಗಲಿಂಗನ ತಲೆಯನ್ನು ತುಳಿಯಬೇಕು ಎನ್ನುವಷ್ಟರಲ್ಲಿ ಬೆದರಿ ಕುದುರೆ 4 ಹೆಜ್ಜೆ ಹಿಂದೆ ಸರಿದು ನಿಲ್ಲುತ್ತದೆ. ಆಗ ನಿರುಪಾಧಿಗಳು ಧಡಿಯನ್ನು ಕುಕ್ಕದಾಗ ಮುಂದೆ ಚಲಿಸದೆ ನಿಲ್ಲುತ್ತದೆ. ನಮ್ಮ ಕುದುರೆ ಇಂದೇಕೆ ವಿಚಿತ್ರವಾಗಿ ವರ್ತಿಸುತ್ತಿದೆ? ಎಂದು ನಿಧಾನವಾಗಿ ಕೆಳಗೆ ಇಳಿದು ಸುತ್ತಲೂ ನೋಡುತ್ತಾನೆ ಮರ-ಗಿಡ, ಪಕ್ಷಿ ಕಾಣುತ್ತದೆ. ಪುನಃ ಮಾರ್ಗದಲ್ಲಿ 4 ಹೆಜ್ಜೆ ಮುಂದೆ ಹೋಗಿ ನೋಡುತ್ತಾನೆ..। ಹುಸುಕಿನಲ್ಲಿ ಕರ್‍ರಗೆ ಇರುವ ತಲೆಯೊಂದು ಕಾಣುತ್ತದೆ. ನೋಡುಗರಿಗೆ ಈ ದೃಶ್ಯವು ವಿಚಿತ್ರ ಮತ್ತು ಪ್ರಶ್ನಾರ್ಥಕವಾಗಿ ಕಾಣಿಸುತ್ತಿತ್ತು. ಗುರುಗಳು "ಏನಪ್ಪ ನಿನ್ನನ್ನು ಇಲ್ಲಿ ಹುಸುಕಿನಲ್ಲಿ ಹುಗಿದವರ್‍ಯಾರು? ಎಂದು ಪ್ರಶ್ನಿಸಿದನು. ಅದಕ್ಕೆ ನಾಗಲಿಂಗರು "ನನ್ನನ್ನು ಯಾರು ಉಗಿದಿಲ್ಲ ನಾನೆ ಹೀಗೆ ಮಾಡಿಕೊಂಡಿದ್ದೆನೆ. 'ನೀವು ನನ್ನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕು ಗುರುವೇ ಅಂದಾಗ ಮಾತ್ರ ನಾನು ಮೇಲೆ ಬರುತ್ತೇನೆ, ಎಂದನು. ಆಗ ನಿರುಪಾದಿಗಳು ಯಾವ ಪ್ರಶ್ನೆಯನ್ನು ಕೇಳದೆ ನೀನು ಹೇಳಿದಂತೆ ಆಗಲಪ್ಪ ನೀನಿಗ ನನ್ನ ಶಿಷ್ಯನಾದೆ ಎಂದು ಹೇಳಿದಾಗ ಹುಸುಕಿನಿಂದ ನಾಗಲಿಂಗನು ಹೊರಗೆ ಬಂದನು. ಕುದುರೆ ಶ್ರೀಮಠದ ಕಡೆಗೆ ಮುಂದೆ-ಮುಂದೆ ನಡೆದಂತೆಲ್ಲ ಗುರು ಶಿಷ್ಯರಿಬ್ಬರೂ ನಡೆದುಕೊಂಡು ಹೊರಟರು,

[1] ಅನಂತರಾಮು ಕೆ. (2018). *ಅಜಾತ ನಾಗಲಿಂಗಸ್ವಾಮಿ ಜೀವನ ಚರಿತೆ.* ಪುಟ- 15

ಅಲ್ಲಿ ಪ್ರತಿನಿತ್ಯ ನಾಗಲಿಂಗನು ಊರಿನಲ್ಲಿ ಭೀಕ್ಷಟನೆ ಮಾಡುತ್ತಾ ಶ್ರೀಮಠದ ಹೂಗಿದ ಮರಗಳನ್ನು ಪೋಷಿಸುತ್ತಾ ಸದ್ಗುರುವಿನ ಅನೇಕ ವಿದ್ಯಗಳನ್ನು ಕಲಿತನು.

ಬಸವಂತಾಚಾರ್ಯ ಬೆಳ್ಳಿಗಟ್ಟಿಯವರು ಬರೆದ ನಾಗಲಿಂಗಾವಧೂತ ಪುರಾಣದಲ್ಲಿ ಶ್ರೀ ನಾಗಲಿಂಗರು ಸ್ತುತಿಸಿದ ತತ್ವಪದದಲ್ಲಿ ಅವರಿಗೂ ಮತ್ತು ತಮ್ಮ ಗುರುಗಳ ನಡುವಿನ ಸಂಬಂಧವನ್ನು ಗುರುತಿಸಬಹುದಾಗಿದೆ.

***"ಪರಮಗುರು ನಿರುಪಾಧೀ ಸ್ವಾಮಿಯು/***
***ಹರುಷದಿಂದ ನಾಗಲಿಂಗಗೆ/***
***ಮರೆಯುತಿಪ್ಪ ಮಂತ್ರಾಲಯ ಹಠಯೋಗಗಳ ನೊರೆದಾ"***[2]

ಇಲ್ಲಿ ನಿರುಪಾಧೀಶ್ವರರಿಗೆ ನಾಗಲಿಂಗಸ್ವಾಮಿಯವರು ಗುರುಗಳು ಈ ಧರೆಯನ್ನು ಉದ್ಧರಿಸು, ಪೋಷಿಸು, ಕಾಪಾಡು ಎಂದು ಆಶೀರ್ವಾದ ಮಾಡಿರುವುದನ್ನು ನಾಗಲಿಂಗವಧೂತ ಪುರಾಣದಲ್ಲಿ ಕಂಡುಬರುತ್ತದೆ. ನಿರುಪಾಧೀಶರು ತಮ್ಮ ಶ್ರೀಮಠದಲ್ಲಿ ಸಾಧನೆ ಮಾಡಿದ ಶಿಷ್ಯನನ್ನು ಹರಸಿ ಕಳುಹಿಸುತ್ತಿರುವುದ್ದನ್ನು ಮತ್ತು ಸಮಾಜದಲ್ಲಿನ ಅಂಕು–ಡೊಂಕುಗಳನ್ನು ತಿದ್ದಲು ಗುರು ಒಬ್ಬರಿಂದಲೇ ಸಾಧ್ಯವಿಲ್ಲ, ಶಿಷ್ಯರ ಮೂಲಕ ಗುಣಾತ್ಮಕವಾಗಿ ಜೊತೆಗೂಡಿ ಸಮಾಜವನ್ನು ಮುನ್ನಡೆಸಿ ಮಾನವ ಧರ್ಮದ ತಿರುವುಗಳನ್ನು ತಿದ್ದುತ್ತಿರುವುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಇದೇ ಪುರಾಣದ ಅದೇ ಅಧ್ಯಾಯದಲ್ಲಿ ಮೂರನೇ ಚರಣದಲ್ಲಿ

***"ಅಂದು ಶ್ರೀ ನಿರುಪಾಧೀ ಗುರುವಾ /***
***ಕಂದ ಶಿಷ್ಯನ ಪ್ರಶ್ನೆಗೆ ತ್ವಾ /***
***ನಂದ ದಿಂದಲೊ ನಾಗಲಿಂಗಾ ನಿನ್ನ ಪ್ರಶ್ನೆಕ್ಕೆ /***
***ಅಂದದಿಂ ಶೃತಿಯಲ್ಲಿ ಪೇಳಿಹ /***
***ಬಂದಿ ನಾಶಕ ನಾಲ್ಕು ಯೋಗವ /***
***ಮುಂದೆ ಸಾಂಖ್ಯ ವಿಚಾರವಾತ್ಮ ವಿಚಾರವನ್ನೊರೆವೆ"*** [3]

ನಾಗಲಿಂಗ ಮತ್ತು ನಿರುಪಾಧೀಶ್ವರರ ಮಧ್ಯೆ ದಿನಗಳೆದಂತೆ ಗುರು ಶಿಷ್ಯರ ಸಂಬಂಧ ಅವಿನಾಭಾವವಾಗಿ ಮೂಡಿತು. ಹೀಗೆ ನಿರುಪಾಧೀಶ್ವರರು ಪ್ರತಿ ಹುಣ್ಣಿಮೆಗೆ ಒಮ್ಮೆ ಪ್ರಯಾಣ ಬೆಳೆಸಿ ಅಕ್ಕ–ಪಕ್ಕದ ಸುತ್ತಲಿನ ಸ್ಥಳಗಳಿಗೆ ಹೋಗಿ ಮಾನವ ಧರ್ಮದ ತಿರುಳನ್ನು ಪ್ರಸಾರ ಮಾಡುವಾಗ ಅಲ್ಲಲ್ಲಿ ಈ ರೀತಿಯ ಶಿಷ್ಯರು ನಿರುಪಾಧಗಳಿಗೆ ಅಲ್ಲಲ್ಲಿಯೇ ಆಶೀರ್ವಾದ ಮಾಡುತಿದ್ದರು. ಅಂತಹವರಲ್ಲಿ ಬನಹಟ್ಟಿ ರುದ್ರದೇವರು, ಇಟಗಿಯ ಭೀಮಾಂಬಿಕೆ ಮುಂತಾದವರು ಪ್ರಮುಖರಾದವರಾಗಿದ್ದಾರೆ.

**ಬನಹಟ್ಟಿ ರುದ್ರದೇವರು**

ಬನಹಟ್ಟಿ ನಗರವು ಕೃಷ್ಣ ನದಿಯ ದಂಡೆಯ ಮೇಲೆ ಕರ್ನಾಟಕದಲ್ಲಿ ಹರಿಯುವ ಅತ ಉದ್ದವಾದ ನದಿಯಾದ ಕೃಷ್ಣಾ ನದಿಯ ದಂಡೆಯ ಮೇಲಿರುವ ಬಾಗಲಕೋಟೆ ಜಿಲ್ಲೆಯ ಒಂದು ಪಟ್ಟಣವಾಗಿದೆ. ಇದು ಜಮುಖಂಡಿಯಿಂದ ಪಶ್ಚಿಮಕ್ಕೆ 19 ಕಿ, ಮೀ ದೂರದಲ್ಲಿದೆ. ಇದು 16.47 ಉತ್ತರ, 75.12 ಪೂರ್ವದ ನಿರ್ದೇಶಾಂಕಗಳಲ್ಲಿ ಕಂಡು ಬರುತ್ತದೆ. ಇಲ್ಲಿಯೂ ಕೂಡ ರುದ್ರಮಹಾಸ್ವಾಮಿಯವರು ಅಂಕಲಿಮಠದ ಶ್ರೀನಿರುಪಾಧೀಶ್ವರರ ಶಿಷ್ಯರಾಗಿದ್ದರು ಎಂಬ ವಿಷಯ ವೇದಮೂರ್ತಿ ಪಂಡಿತ ಸದಾಶಿವ ಶಾಸ್ತ್ರಿಗಳು ಬರೆದಂತಹ 'ರುದ್ರದೇವರ ಪುರಾಣ' ದಿಂದ ತಿಳಿದು ಬರುತ್ತದೆ. ಅವರ ಈ ಪುರಾಣವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ರುದ್ರದೇವರ ಪುರಾಣದ ಐದನೆಯ ಅಧ್ಯಾಯದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ.

**"ಪರಮ ನಿರುಪಾಧೀಶರ ರುದ್ರನ**
**ಗುರುಗಳಾದ ವಿಷಯಮಂ ಬಹು**
**ಸರಸವೆನೆ ವರ್ಣಿಪೆನು ವರವಿದುಷರ್ಕಳೊಲೆವಂತೆ"**[4]

"ಪೂಜ್ಯ ಶ್ರೀ ಸದ್ಗುರು ರುದ್ರಮುನಿ ಸ್ವಾಮಿಗಳು ತಲೆಕಟ್ಟಿನ ನಿರುಪಾದಿ ಸ್ವಾಮಿಗಳವರ ಕರಕಮಲ ಸಂಜಾತರು, ಪೂಜ್ಯ ಶ್ರೀ ನಿರುಪಾದಿಗಳು ಉಪಾದಿಗೆ ಹತ್ತದೆ ಮೆರೆದ ಮಹಾನುಭಾವರು ಅಂತಹವರ ಶಿಷ್ಯರಾದ ರುದ್ರಮುನಿಗಳೂ ನಿರುಪಾದಿಗಳಂತೆ ಸಂಸಾರದಲ್ಲಿದ್ದರೂ ನಿರ್ಮೋಹಿಗಳಾಗಿದ್ದಾರು"[5]. ಯಾವುದೇ ಒಂದು ವಿಷಯ, ಪ್ರಶ್ನೆ ಕೇಳಿದರೆ, ಶ್ರೀನಿರುಪಾಧೀಗಳು ಆನಂದದಿಂದ ಸಂತೋಷವಾಗಿ ನಗು–ನಗುತಾ, ಹೊಳೆವ ಸೂರ್ಯನಂತೆ ಕವಿಗಳ ಗುಂಪಿನಲ್ಲಿ ಕಾಣಿಸುತ್ತಿರುವವರಾಗಿದ್ದರು. ಎಂದು ಎಂದರೆ ಹೊಳೆವ ಸೂರ್ಯನಿಗೆ ಹೊಲಿಸಿದಾರೆ. ಇದರಿಂದ ಶ್ರೀನಿರುಪಾದ್ಧೀಶರು ಬನಹಟ್ಟಿ ರುದ್ರದೇವಸ್ವಾಮಿಯವರ ಗುರುಗಳು ಎನ್ನುವುದು ತಿಳಿಯುತ್ತದೆ.

***"ಮರುದಿನವೇ ಶಾಲೀನ ರುದ್ರನ /***
***ಭರದೆ ಬಂದನು ರಾಮದುರ್ಗದ /***
***ಪರಿಸರದ ಬಾಗೋಜಿಕೊಪ್ಪಕ ನುರತಿಯ ಪೊರ್ದು /***
***ಗುರು ನಿರುಪಾದ್ಧಿಶರು ಮಾದೋಡು /***
***ಕರಕಪಾಲುರಿ ನಯನದಳ ಭುಜ /***
***ಪರಮ ಪಂಚಾಸ್ಯಗಳ ನೀತಿಗೆ ತೋರಿದನುಮಾಗ//***[6]

ಈ ಮೇಲೆ ಭಾಮಿನಿ ಷಟ್ಪದಿಯಲ್ಲಿ ನಿರುಪಾದ್ಧಿ ಸ್ವಾಮಿಗಳನ್ನು ರುದ್ರಮಹಾ ಸ್ವಾಮಿಗಳು ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲೂಕಿನ ಚಿಕ್ಕೊಪ್ಪದ ಹತ್ತಿರವಿರುವ ಬಾಗೋಜಿಕೊಪ್ಪದ ಉಲ್ಲೇಖ ಮಾಡಿದ್ದಾರೆ. ಬಾಗೋಜಿಕೊಪ್ಪದಲ್ಲಿ ರುದ್ರಮಹಾಸ್ವಾಮಿಗಳಿಗೆ ಉಪದೇಶ ಮಾಡಿದ್ದನ್ನು ಸ್ಪಷ್ಟವಾಗಿ ತಿಳಿಯುತ್ತದೆ. ಹಾಗಾಗಿ ಇವರು ಸಹ ನಿರುಪಾಧಿಗಳ

---

[2] ಶ್ರೀ ಬಸವಂತಾಚಾರ್ಯ, (1979). *ನಾಗಲಿಂಗಾವಧೂತ ಪುರಾಣ*, ಶ್ರೀ ಶಾಂಪಿಲ್ಯಾಶ್ರಮ, ನಾಗಶೆಟ್ಟಿಕೊಪ್ಪ, ಹುಬ್ಬಳ್ಳಿ. ಪು. 37

[3] ಮೇಲಿನದೇ. ಪು.37

[4] ಸದಾಶಿವ ಶಾಸ್ತ್ರಿಗಳು, ವೇ. ಪಂ. (1989). ಶ್ರೀ ರುದ್ರಮಹಾಸ್ವಾಮಿಗಳ ಪುರಾಣ ಪುಟ–45

[5] ಪೂಜ್ಯಶ್ರೀ ಸಹಜಾನಂದ ಮಹಾಸ್ವಾಮಿಗಳು, ಸಿದ್ಧಾರೂಢಮಠ, ಮಹಾಲಿಂಗಪುರ. (2008). ಶ್ರೀ ಸದ್ಗುರು ಶಿವಾನಂದ ಚರಿತಾಮೃತ, ಪು.68

[6] ಪೂರ್ವೋಕ್ತ., 3. ಪುಟ–37

ಶಿಷ್ಯರಾಗಿದ್ದಾರೆ. ಶ್ರೀ ನಿರುಪಾಧೀಶ್ವರರ ವಿಚಾರಧಾರೆಗಳು ಬನಹಟ್ಟಿ ರುದ್ರಮುನಿ ಮಹಾಸ್ವಾಮಿಗಳು ಮೂಲಕ ಗುಡಿಸಾಗರ ಪೂಜ್ಯಸಾಧುಸಿದ್ಧ ಶಿವಯೋಗಿಗಳು, ಗದಗದ ಶ್ರೀ ಶಿವಾನಂದರು, ನರಗುಂದದ ಪತ್ರಿವನ ಮಠದ ಈರಪ್ಪಜ್ಜನವರು, ಮಾಡಲಗೇರಿಯ ಶ್ರೀ ರಾಮಪ್ಪಜ್ಜನವರು, ಸೀಮಿಕೇರಿಯ ಶ್ರೀ ಶಿವಯ್ಯ ಸ್ವಾಮಿಗಳು, ಮೈಸೂರಿನ ಶ್ರೀ ಮುರಿಗೆಪ್ಪನವರು, ಕಬ್ಬೂರಿನ ಮಾತಾಶ್ರೀ ಚನ್ನಮ್ಮ ತಾಯಿಯವರು, ಮಹಾರಾಷ್ಟ್ರದ ಶ್ರೀ ಬಿಚ್ಚಸಿಂಗ ಮಹಾರಾಜರು, ಹುಣಸಿಕಟ್ಟಿಯ ಶ್ರೀ ಸಿದ್ದಪ್ಪಜ್ಜನವರು ಮತ್ತು ಗುಳೇದಗುಡ್ಡ ಶಿವಪ್ಪಯ್ಯ ಮುಂತಾದವರು ಸಮಾಜದಲ್ಲಿ ಮಾನವ ಧರ್ಮದ ಹೆಸರಿನಲ್ಲಿ ಜಾತಿ, ಮತ, ಭೇಧ-ಭಾವವಿಲ್ಲದೆ ಗಡಿಯ ಮಿತಿಯಿಲ್ಲದೆ, ಲಿಂಗಭೇಧವಿಲ್ಲದೆ ಬನಹಟ್ಟಿ ರುದ್ರಮುನಿಗಳ ಮೂಲಕ ಸಮಾಜದಲ್ಲಿ ಮಾನವ ಧರ್ಮದ ತಿರುಳನ್ನು ಪ್ರಸಾರ ಮಾಡಿದ್ದಾರೆ. ಅವರ ನಂತರದ ಪರಂಪರೆಗಳು ಸಹ ಅದೇ ಮಾರ್ಗದಲ್ಲಿ ನಡೆಯುತ್ತಿವೆ. ಗದುಗಿನ ಶಿವಶನಂದಪ್ಪ ಅವರ ಮಠದ ಮುಂದಿನ ದಾನ ಶಾಸನ ಕೂಡ ಮಾನವ ಧರ್ಮದ ಹೆಸರಿನಲ್ಲಿರುವು ವಿಶೇಷ.[7]

**ಉಪಸಂಹಾರ**

ಭಾರತೀಯರ ಜೀವನದಲ್ಲಿ ಗುರುಮಠಗಳು ಪ್ರಮುಖವಾದ ಸ್ಥಾನವನ್ನು ಹೊಂದಿವೆ. ಮಠಗಳು ಕೇವಲ ಆಧ್ಯಾತ್ಮಕ್ಕೆ ಮಾತ್ರ ಸೀಮಿತವಾಗದೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸುಧಾರಣೆಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಇದೇ ಮಾರ್ಗದಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಅಂಕಲಗಿ ಗ್ರಾಮದ ಶ್ರೀ ಅಡವಿ ಸಿದ್ಧೇಶ್ವರರು ಜಾತಿ-ಮತ, ಧರ್ಮ, ಮೇಲು-ಕೀಳುಗಳೆನ್ನದೆ ಎಲ್ಲಾ ಜನರಿಗೆ ಶರಣಪರಂಪರೆಯ ಜ್ಞಾನಧಾರೆಗಳನ್ನು ಉಣಬಡಿಸುತ್ತಿದ್ದರು. ಅವರ ಪರಮ ಶಿಷ್ಯರಾಗಿದ್ದಂತಹ ಶ್ರೀಗುರು ಅಂಕಲಿಮಠಕ್ಕೆ ಹೋಗಿ ತಮ್ಮ ಕಾರ್ಯವನ್ನು ಮುಂದುವರೆಸಲು ಅಪ್ಪಣೆ ನೀಡಿದರು. ಸದ್ಗುರುವಿನ ಮಾತಿನಂತೆ ಅಂಕಲಿಯಿಂದ ಶಿರಸಬಂಧನಪುರಕ್ಕೆ ಬಂದು ಅಲ್ಲಿ ಹೊನ್ನಪ್ಪನ ಕೆರೆಯ ಹತ್ತಿರ ಅಂಕಲಗಿ ಗುರುವಿನ ಸವಿನೆನಪಿಗಾಗಿ ಅಂಕಲಿಮಠ (ಶಿರಸಾಬಂಧನ) ಎಂದು ಹೆಸರನ್ನು ಇಟ್ಟು ಅಂಕಲಿಮಠವನ್ನು ಸ್ಥಾಪಿಸಿದರು. ಅಂದಿನಿಂದ ಅವರ ಮೂಲಕ ಮಠದ ತ್ರಿವಿಧ ದಾಸೋಹ ಆರಂಭವಾಗಿ ಇಂದಿನವರೆಗೂ ಸುತ್ತ-ಮುತ್ತಲಿನ ಭಕ್ತರ ಮನದಲ್ಲಿ ಶ್ರೀಮಠವು ಪೂಜ್ಯನೀಯ ಸ್ಥಾನವನ್ನು ಪಡೆದುಕೊಂಡಿದೆ.

**ಪರಾಮರ್ಶನ ಗ್ರಂಥಗಳು**


- ವೆಂಕಟೇಶ್. ಆರ್. (2010). *ಅಂಕಲಿಮಠ ಶ್ರೀ ಸದ್ಗುರು ನಿರುಪಾಧೀಶ್ವರರ ಜೀವನ ಚರಿತ್ರೆ.* ಅಂಕಲಿಮಠ ಪ್ರಕಾಶನ.
- ನದಾಫ್, ಎಂ.ಎಚ್. (2005). *ಅಮರಗೋಳ ತ್ರಿವಿಧ ದಾಸೋಹ ಮೂರ್ತಿ.* ಅಂಕಲಿಮಠ ಪ್ರಕಾಶನ.
- ಅನಂತರಾಮು ಕೆ. (2012). *ಅಜಾತ ನಾಗಲಿಂಗಸ್ವಾಮಿ ಜೀವನ ಚರಿತ್ರೆ.* ಶ್ರೀನಾಗಲಿಂಗಸ್ವಾಮಿ ಗ್ರಂಥಮಾಲೆ, ಶ್ರೀನಾಗಲಿಂಗಸ್ವಾಮಿ ಮಠ.
- ಕೃಷ್ಣಮೂರ್ತಿ, ಮ.ಸು. (2010). *ಸಿದ್ಧ ಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶಿವಾನಂದ ಗುಬ್ಬಣ್ಣನವರ. (2010). *ಶಿಶುನಾಳ ಷರೀಫ್ ಗೀತೆಗಳು.* ಅಕ್ಷಯ ಪ್ರಕಾಶನ.
- ಬಸವಾರಾಜ ಸಬರದ. (1996). *ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು.* ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,
- ಸದಾಶಿವ ಶಾಸ್ತ್ರೀಗಳು ವೇ. ಪಂ. (1989). *ರುದ್ರದೇವರ ಪುರಾಣ.* ಅಂಕಲಿಮಠ ಪ್ರಕಾಶನ
- ಬಸಯ್ಯ ಸ್ವಾಮಿಗಳು, ವೇ. ಮೂ. (2001). *ರುದ್ರೇಶ ಮಠ, ಬನಹಟ್ಟಿ, ವಿದೇಹ ಕೈವಲ್ಯ.* ಶ್ರೀ ವೀರಭದ್ರೇಶ್ವರ ಆಫ್‌ಸೆಟ್ ಪ್ರಿಂಟರ್ಸ್.


[7] ದಾನ ಶಾಸನ, ಗದುಗಿನ ಶಿವಶನಂದಪ್ಪ ಅವರ ಮಠ